# ಬಂಟ್ವಾಳ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ.

**ಸಿ ಸಿ ನಂ. : 220/2020** **ಪಿಡಬ್ಲ್ಯೂ : 3**

**ಸಿಡಬ್ಲ್ಯೂ : 3**

**ಹೆಸರು** : ಶಂಕರ ಶೆಟ್ಟಿ

**ತಂದೆಯ ಹೆಸರು** : ಶೀನ ಶೆಟ್ಟಿ

**ವಯಸ್ಸು** : **44 ವರ್ಷ**

**ಉದ್ಯೋಗ** : ಕೃಷಿ

**ವಾಸಸ್ಥಳ** : ಮೂಡು ಪಡುಕೋಡು

ದಿಃ 19.06.**2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ಅದು ಸೀಜರ್ ಮಹಜರಾಗಿದ್ದು ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿಪಿ-**3** ಎಂದು ಸಾಕ್ಷಿಯ ಸಹಿಯನ್ನು ನಿಪಿ-**3**ಎ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಪುಂಜಾಲಕಟ್ಟೆ ಠಾಣೆಯಲ್ಲಿ ದಿನಾಂಕ **01.11.2019**ರಂದು ಮದ್ಯಾಹ್ನ **12.30** ರಿಂದ **01.20**ರ ವೇಳೆಯಲ್ಲಿ ಮಾಡಿರುತ್ತೇನೆ. ನಾನು ಸಹಿ ಮಾಡುವ ಸಮಯ ತನಿಖಾಧಿಕಾರಿ, ನಾನು ಮತ್ತು ಚಾಸಾ-**4,** ಆರೋಪಿ ಇದ್ದೆವು. ಆ ಸಮಯದಲ್ಲಿ ಆರೋಪಿ ಮಂಜುನಾಥ ಮೊಬೈಲನ್ನು ಪೊಲೀಸರಿಗೆ ನೀಡಿದ್ದು ಅದನ್ನು ನಮ್ಮಗಳ ಸಮಕ್ಷಮ ವಶಕ್ಕೆ ಪಡೆದರು. ಹಾಗೇ ವಶಕ್ಕೆ ಪಡೆದ ಮೊಬೈಲ್ ವಿವೋ **1818** ಕಡು ನೀಲಿ ಬಣ್ಣದ್ದಾಗಿತ್ತು. ನ್ಯಾಯಾಲಯದ ಮುಂದಿರುವ ಸದರಿ ಮೊಬೈಲನ್ನು ನೋಡಿ ಗುರುತಿಸಿದ್ದರಿಂದ ಎಂಓ-**2** ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಮಹಜರಿನಲ್ಲಿ ಬರೆದಿರುವ ವಿಚಾರ ಗೊತ್ತು. ನಿಪಿ-**2** ಮಹಜರಿನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಸಹಿಯನ್ನು ನಿಪಿ-**2**ಬಿ ಎಂದು ಗುರುತಿಸಲಾಯಿತು. ದಿನಾಂಕ **08.11.2019**ರಂದು ಸದರಿ

ಮಹಜರು ಮಾಡಿದ್ದು ಆ ಸಮಯದಲ್ಲಿ ತನಿಖಾಧಿಕಾರಿ, ನಾನು ಮತ್ತು ಚಾಸಾ-2, 4 ಇದ್ದೆವು. ಆ ಸಮಯದಲ್ಲಿ ಸ್ಯಾಂಸಂಗ್ ಮೊಬೈಲನ್ನು ಚಾಸಾ-2ರವರಿಂದ ವಶಕ್ಕೆ ಪಡೆದರು. ನ್ಯಾಯಾಲಯದ ಮುಂದಿರುವ ಎಂಓ-1 ಎಂದು ಗುರುತಿಸಲಾಗಿರುವ ಸ್ಯಾಂಸಂಗ್ ಫೋನನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮಹಜರನ್ನು ಬೆ 11.00 ರಿಂದ 12.00ರವರೆಗೆ ಮಾಡಿರುತ್ತಾರೆ. ಅದರಲ್ಲಿ ಬರೆದಿರುವ ವಿಚಾರ ಗೊತ್ತು.

**ಪಾಟೀ ಸವಾಲು : ಆರೋಪಿ ಪರ** ಶ್ರೀ ಎಸ್ ಎಂ ವಿ **ವಕೀಲರಿಂದ:**

ನನ್ನನ್ನು ಠಾಣೆಗೆ ಬರಲು ಪೊಲೀಸರು ಬರಲು ಹೇಳಿದರು. ಹಾಗೇ ಬರಲು ನನಗೆ ಪೊಲೀಸರು ಲಿಖಿತವಾಗಿ ನೋಟೀಸು ಕೊಟ್ಟಿಲ್ಲ. ದಿನೇಶ್ ಎಂಬ ನನ್ನ ಸ್ನೇಹಿತನ ಮೂಲಕ ಠಾಣೆಗೆ ಬರಲು ಹೇಳಿದ್ದರು. ದಿನೇಶರವರಲ್ಲಿ ನಾನು ಯಾವ ಕಾರಣಕ್ಕಾಗಿ ಪೊಲೀಸರು ಬರಬೇಕೆಂದು ಹೇಳಿದ್ದರು ಎಂದು ವಿಚಾರಿಸಿದ್ದೀರಾ ಎಂದರೆ ಪೊಲೀಸರು ಬರಲು ಹೇಳಿದ ಕಾರಣ ಹೋಗಿದ್ದೆನು. ಈ ಪ್ರಕರಣ ಹೊರತು ಪಡಿಸಿ ಬೇರೆ ಪ್ರಕರಣದಲ್ಲಿ ಸಾಕ್ಷಿಯಾಗಿ ಸಹಿ ಮಾಡಿದ್ದೇನೆ. ಹಾಗೇ ಎಷ್ಟು ಕೇಸಿನಲ್ಲಿ ಸಾಕ್ಷಿಯಾಗಿದ್ದೇನೆಂದು ನಿಖರವಾಗಿ ಹೇಳಲು ಆಗುವುದಿಲ್ಲ. ನಾನು ಪುಂಜಾಲಕಟ್ಟೆ ಠಾಣೆಯಲ್ಲಿ ಖಾಯಂ ಸಾಕ್ಷಿ ಎಂದರೆ ಸರಿಯಲ್ಲ. 01.11.2019ರಂದು 12.30 ರಿಂದ 01.30ರ ನಡುವೆ ಠಾಣೆಗೆ ಹೋಗಿದ್ದೆ. ನಾನು ಠಾಣೆಗೆ ಹೋದ ಸಮಯದಲ್ಲಿ ಪೊಲೀಸರು ಸದರಿ ಮಹಜರನ್ನು ತಯಾರಿಸಿಟ್ಟಿದ್ದರು ಎಂದರೆ ಸರಿಯಲ್ಲ.

ನನಗೆ ದೂರುದಾರರ ಪರಿಚಯ ಇಲ್ಲ. ಈ ಕೇಸಿನ ಬಗ್ಗೆ ತನಿಖಾಧಿಕಾರಿಯವರು ಮಾಹಿತಿ ನೀಡಿಲ್ಲ, ಸಾಕ್ಷಿ ಮುಂದುವರಿದು ಪುನಃ ಆದಿನ ಪೊಲೀಸರು ಮಾಹಿತಿ ಕೊಟ್ಟಿದ್ದರು ಎನ್ನುತ್ತಾರೆ. ಬೇರೆ ಬೇರೆ ದಿನಾಂಕದಂದು ವಶಪಡಿಸಿಕೊಂಡ ಎಂಓ 1 ಮತ್ತು 2 ಮುದ್ದೆ ಮಾಲುಗಳ ಮೇಲೆ ಅಂಟಿಸಿದ ಚೀಟಿಯ ಮೇಲೆ ಸಹಿ ಪಡೆದಿಲ್ಲ. ನನ್ನ ಸಮಕ್ಷಮ ಸದರಿ ಮುದ್ದೆಮಾಲು ವಶಪಡಿಸಿಕೊಳ್ಳದ ಕಾರಣ ಅವುಗಳ ಮೇಲೆ ಅಂಟಿಸಿದ ಚೀಟಿಯ ಮೇಲೆ ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ. ಸದರಿ ಮಹಜರನ್ನು ಪುಂಜಾಲಕಟ್ಟೆ ಪೊಲೀಸ್ ಠಾಣೆಯ ಸಂದೀಪ್ ಎನ್ನುವವರು ತಯಾರಿಸಿದ್ದರು.

ಮೊಬೈಲುಗಳನ್ನು ವಶಪಸಿಕೊಳ್ಳುವ ಸಂದರ್ಭದಲ್ಲಿ ಮೊಬೈಲಿನಲ್ಲಿರುವ ಅಶ್ಲೀಲ ಫೋಟೋಗಳನ್ನು ನನಗೆ ತೋರಿಸಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದ ಮೊಬೈಲ್ ಅಲ್ಲದಿದ್ದರೂ ತನಿಖಾಧಿಕಾರಿಯ ಒತ್ತಡಕ್ಕೆ ಮಣಿದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

ನ ಉ ರೀ ಬ ನ್ಯಾ ಬಿ ಮಾಡಲಾಯಿತು.

ಓ ಹೇ ಕೇ ಸ ಇದೆ.

**ಹಿರಿಯಸಿವಿಲ್‌ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ಬಂಟ್ವಾಳ.**